| | | | |
|---|---|---|---|
| | | | ಕಲ್ಪಿಸಲು / ಕೂಡು ರಸ್ತೆ ನಿರ್ಮಾಣ |
| 10. | ಬಳ್ಳಾರಿ | – | ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಇತ್ಯರ್ಥದಲ್ಲಿದೆ. |

**ವಿಷಯ : ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿ**

**216 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**

**ಜಿ.ಜನಾರ್ಧನ ರೆಡ್ಡಿ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು**

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳನ್ನು ಪ್ರವಾಸೋದ್ಯಮ ಸ್ಥಳಗಳೆಂದು ಗುರುತಿಸಲಾಗಿದೆ. (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಬೀದರ್ ಜಿಲ್ಲೆಯ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

01. ಬೀದರ್
02. ಜಲಸಂಗಿ
03. ನಾರಾಯಣಪುರ
04. ಬಸವಕಲ್ಯಾಣ
05. ಕಾರಂಜ ಜಲಾಶಯ

ಆ) ಈ ಸ್ಥಳಗಳ ಅಭಿವೃದ್ಧಿಗೆ ಸರ್ಕಾರ ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಿರುವ ಹಣದ ಮೊತ್ತವೆಷ್ಟು; ಹಾಗೂ ಈ ಹಣದಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ(ಪೂರ್ಣ ವಿವರಗಳನ್ನು ಒದಗಿಸುವುದು);

01. 2006–07ನೇ ಸಾಲಿನಲ್ಲಿ ಬೀದರ್ ನಗರದ ಸಮೀಪದಲ್ಲಿರುವ ಪಾಪನಾಶ ದೇವಾಲಯ ಬಳಿ ಪ್ರವಾಸಿ ಸೌಲಭ್ಯ ನಿರ್ಮಿಸಲು ಮತ್ತು ಸುತ್ತಮುತ್ತ ಪ್ರವಾಸೋದ್ಯಮ ಸೌಲಭ್ಯ ಕಲ್ಪಿಸುವ ಬಗ್ಗೆ ರೂ. 100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

02. 2007–08ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ರೂ. 100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

03. 2007–08ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಚೌಬಾರ ಹಾಗೂ ಗವಾನ ಮದರಸಾ ಸ್ಮಾರಕಗಳ ಸುತ್ತಲೂ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ರೂ. 25.00 ಲಕ್ಷಗಳನ್ನೂ ವೆಚ್ಚ ಮಾಡಲಾಗಿದೆ.

04. 2008–09ನೇ ಸಾಲಿನಲ್ಲಿ ಗುರತಾಗದ್ದಿ ತ್ರಿಶತಮಾನೋತ್ಸವ ಅಂಗವಾಗಿ ರೂ. 3500.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು ಬೀದರ್ ನಗರದಲ್ಲಿ ಅನೇಕ ಸ್ಮಾರಕಗಳ ಅಭಿವೃದ್ಧಿ ಹಾಗೂ ರಸ್ತೆಗಳ ಅಗಲೀಕರಣ, ದುರಸ್ತಿ ಇತ್ಯಾದಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರದ ಮುಂದಿರುವ ಕ್ರಮಗಳೇನು;

01. ಬೀದರ್ ಕೋಟೆಗೆ ಧ್ವನಿ ಮತ್ತು ಬೆಳಕಿನ ಯೋಜನೆಗೆ ಅಳವಡಿಸುವಿಕೆ.
02. ಬಸವಕಲ್ಯಾಣ ಅಭಿವೃದ್ಧಿ ಸಮಿತಿಯೊಂದಿಗೆ ಸಹಕರಿಸುವುದು.
03. ಕಾರಂಜ ಜಲಾಶಯದ ಬಳಿ ಲ್ಯಾಂಡ್ ಸ್ಕೇಪಿಂಗ್ ಮಕ್ಕಳ ಉದ್ಯಾನವನ ಇತ್ಯಾದಿಗಳನ್ನು ಕಲ್ಪಿಸಲು ಕೇಂದ್ರದ ಧನ ಸಹಾಯವನ್ನು ಪಡೆಯಲಾಗಿದ್ದು, ಸೂಕ್ತ ನಿವೇಶನಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಜಿಲ್ಲೆಯಲ್ಲಿ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಸರ್ಕಾರ ಯಾವ ಯಾವ ಸೌಲಭ್ಯ ಮತ್ತು ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದೆ;

01. ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಪ್ರವಾಸಿ ಮಾಹಿತಿ ಕೇಂದ್ರವನ್ನು ತೆರೆದು ಪ್ರವಾಸಿಗರಿಗೆ ಮಾಹಿತಿ ಒದಗಿಸಲಾಗುತ್ತಿದೆ.
02. ಬಸವಕಲ್ಯಾಣದ ಸಸ್ತಾಪುರದ ಬಳಿ ವಸತಿ ಸೌಕರ್ಯವನ್ನು ನಿರ್ಮಿಸಲಾಗಿದೆ.
03. ಹುಮ್ನಾಬಾದ್ ಬಳಿ ರಸ್ತೆ ಬದಿ ಸೌಲಭ್ಯವನ್ನು ನಿರ್ಮಿಸಲಾಗಿದೆ.
04. ಬಸವಕಲ್ಯಾಣದ ಕೋಟೆಯ ಬಳಿ ಶೌಚಾಲಯವನ್ನು ನಿರ್ಮಿಸಲಾಗಿದೆ.
05. ಬೀದರ್ ನಗರದ ನಾನಕ್ ಝರಾ, ನರಸಿಂಹ ಜಾರಿಣಿಗಳ ಬಳಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ.
06. ಬೀದರ್ ನಗರ ಹಾಗೂ ಸುತ್ತಮುತ್ತ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ 2008–09ನೇ ಸಾಲಿನಲ್ಲಿ ರೂ.35.00 ಕೋಟಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ 2009–10ನೇ ಸಾಲಿನಲ್ಲಿ ರೂ.30.00 ಕೋಟಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಉ) ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ನೇರವೇನಾದರೂ ಬಂದಿದೆಯೇ; ಬಂದಿದ್ದಲ್ಲಿ, ಇದರ ವಿವರಗಳೇನು;

ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯದಿಂದ ಗುರುತಾಗದ್ದಿ ತೀಶತಮೊನೋತ್ಸವ ಆಚರಣೆ ಅಂಗವಾಗಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ

ರೂ. 49.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ ಬಿಡುಗಡೆ ಮಾಡಿರುತ್ತದೆ.

ಬೀದರ್ ಜಿಲ್ಲೆಯ ಕಾರಂಜಾ ಜಲಾಶಯದ ಬಳಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದ ಮಂತ್ರಾಲಯದಿಂದ ರೂ. 157.04 ಲಕ್ಷಗಳಿಗೆ ಮಂಜೂರಾತಿ ದೊರಕಿದೆ.

ಉ) ಈ ಹಣದಿಂದ ಯಾವ ಯಾವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುವುದು?

ಜಿಲ್ಲಾ ಆಡಳಿತವು ಸದರಿ ಅನುದಾನದಿಂದ ಬೀದರ್ ನಗರದ ಸ್ಮಾರಕಗಳ ಅಭಿವೃದ್ಧಿ, ರಸ್ತೆಗಳ ಅಗಲೀಕರಣ, ದುರಸ್ತಿಗಳು, ಮೂಲಭೂತ ಸೌಕರ್ಯ ಅಭಿವೃದ್ಧಿ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿರುತ್ತದೆ.

ಕಾರಂಜಾ ಡ್ಯಾಂ ಪ್ರದೇಶದಲ್ಲಿ ನಿವೇಶನ ದೊರೆತ ನಂತರ ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

**ಕರ್ನಾಟಕ ವಿಧಾನಸಭೆ**

**217 ಶ್ರೀ ಈಶ್ವರ್ ಭೀಮಣ್ಣಖಂಡ್ರೆ**
**ಮಾನ್ಯ ಸಾರಿಗೆ ಸಚಿವರು**

ಅ) ರಾಜ್ಯದಲ್ಲಿರುವ ಸಾರಿಗೆ ಸಂಸ್ಥೆಗಳ ಸಂಖ್ಯೆ ಎಷ್ಟು, ಹಾಗೂ ಈ ಸಂಸ್ಥೆಗಳ ವ್ಯಾಪ್ತಿಗೆ ಬರುವ ಜಿಲ್ಲೆಗಳೆಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು);

4 ಸಾರಿಗೆ ಸಂಸ್ಥೆಗಳು.

**1.KSRTC:**

17 ಜಿಲ್ಲೆಗಳು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಚಿಕ್ಕಮಗಳೂರು, ಚಿತ್ರದುರ್ಗ ದಾವಣಗೆರೆ ಶಿವಮೊಗ್ಗ, ಉಡುಪಿ, ದಕ್ಷಿಣಕನ್ನಡ, ಹಾಗೂ ಕೊಡಗು

**2.BMTC:**

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ BMRDA ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಮಾಡುತ್ತಿದೆ.

**3.NWKRTC:**

7 ಜಿಲ್ಲೆಗಳು: ಧಾರವಾಡ, ಬೆಳಗಾವಿ, ಬಿಜಾಪುರ, ಉತ್ತರಕನ್ನಡ ಬಾಗಲಕೋಟೆ, ಗದಗ ಮತ್ತು ಹಾವೇರಿ

**4.NEKRTC:**

6 ಜಿಲ್ಲೆಗಳು: ಗುಲ್ಬರ್ಗಾ, ಯಾದಗೀರ, ಬೀದರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ.